ಕೂತರು. ಯಾವನಾದರೂ ಬಂದು ಮಾತನಾಡಿಸಿಯಾನು, ಬಿಡಿ ಸೈಬರೇ ಅದೆಲ್ಲವ, ಬನ್ನಿ ನೋಡುವಾ ನಾಕು ದಾಪು ಹಾಕಿಬರುವಾ ಎಂದು ಕರೆದಾನು ಅಂತ ಕಾದರು. ಒಂದಲ್ಲ ಎರಡಲ್ಲ ಮೂರು ದಿನ ಸೂರ್ಯ ಕಂತುವ ಹೊತ್ತಿನವರೆಗೂ ಕಾದರು. ಉಹೂಂ ಊರು ಮೈಲಿಗೆಯಲ್ಲಿ ಇದ್ದ ಹಾಗೆ ಸುಂದು ಹೊಡೆದಿತ್ತು. ಯಾವ ಗೃಹಸ್ಥನೂ ಹಾದಿ ಹತ್ತಿ ತಾರಿ ಬಾಗಿಲಿಗೆ ಹಾಯಲಿಲ್ಲ. 'ಸೈಬರು ಕಂಡರೆ... ಥೊ ಯಾಕೆ ಬೇಕು ಇಲ್ಲದ ಪರಾಪತಿ' ಅಂತ ಲೆಕ್ಕಹಾಕಿಕೊಂಡವರ ಹಾಗೆ.

ಸೈಬರು ಇಲ್ಲೇ ಹುಟ್ಟಿದ್ದು. ಇಲ್ಲೇ ಬದುಕಿದ್ದು... ದಣಪೆ ಮೇಲೆ ಕುಂತು ಕುಂತು ಕಣ್ಣೀರು ಬತ್ತಿಸಿಕೊಂಡ ಅವರಿಗೆ, ಅವರು ಇದೂ ತನಕಾ ಬಾಳಿದ ಘನಸ್ಥಿಕೆಯನ್ನೇ ಹಗಣಕಟ್ಟೆಯಲ್ಲಿಟ್ಟು ಹರಾಜು ಹಾಕಿದಂತಾಗಿತ್ತು. ಕೈತಡವಿ 'ಇಲ್ಲೇ ಇಂಥಲ್ಲೇ' ಎಂದು ತೋರಲಾಗದ ಹಾಗೆ, ಬಾಳಿನ ನಂಬಿಕೆಯ ಬುಡವೇ ಕತ್ತರಿಸಿಬಿದ್ದಿತ್ತು. ಮೊದಲೇ ಮಾತು ಕಮ್ಮಿಯ ಸಾಬರು ಹೆಂಡತಿ ಅಮೀನಮ್ಮಳ ಬಳಿಯೂ ಏನೂ ಹೇಳಿಕೊಳ್ಳಲಿಲ್ಲ. ಪೊಲೀಸರು 'ಬಾಂಬು ತಯಾರಿಸ್ತ್ಯಾ ಮಗನೆ' ಎಂದು ಬೆದರಿಸಿದ್ದಕ್ಕಿಂತ ತನ್ನೂರಿನವರು ಎಂದುಕೊಂಡಿದ್ದ ಜನರೂ ತನ್ನನ್ನು ಅನುಮಾನಿಸಿದರೇ, ನಾನು ಎಂಥವನೆಂಬುದು ಇವರಿಗೆ ಗೊತ್ತಿಲ್ಲವೇ... ಎಂದು ಅಳೆದು ಸುರಿಯುತ್ತ ದಕ್ಕಾಗಿ ಕೂತುಬಿಟ್ಟರು. ಎಲ್ಲ ಇರುವಂತಿದ್ದೂ ಒಳಗೊಳಗೇ ಬದಲಿಗೊಂಡು ಬಿಟ್ಟಂತೆ ಮೆಟ್ಟಿಬಿದ್ದರು. ದಣಪೆ ಮೇಲೆ ಕೂತಂತೆಯೇ ಒಂದು ಸಂಜೆ ಕುಸಿದು ಬಿದ್ದಿದ್ದು ಖರೆ. ಉರಿಗೆ ಕರಗಿದ ಕರ್ಪೂರದಂತೆ... ಗರ್ನಾಲು ಸಾಬರು ಹೀಗೆ ಇಷ್ಟು ದೌಡು ಬಂದಾರೆಂದು ಖಬರನೆಲವೂ ಅಂದುಕೊಂಡಿರಲಿಕ್ಕಿಲ್ಲ. ಸಾಬರಿಗೆ ಯಾರೂ ಗರ್ನಾಲು ಹೊಡೆಯಲಿಲ್ಲ. ಬೆಂಕಿ ಹತ್ತಿ ಕರಕಾದ ಮನೆಯ ಮಾಡನ್ನೂ ಯಾರೂ ರಿಪೇರಿ ಮಾಡಿಸಲಿಲ್ಲ. ಹೆಣ್ಣುಮಕ್ಕಳು ಗಂಡನ ಮನೆಗಿದ್ದರು. ಅಮಿನಮ್ಮ ತನ್ನ ತವರು ಸೇರಿದರಂತೆ. ಈಗಲೂ ಯಾರೇ ಎದುರು ಬಂದರೂ, 'ನನ್ನ ಗಂಡ ಬಾಂಬು ಹಾಕುತ್ತಾನೆ ಅಂತ ಹ್ಯಾಂಗೆ ಹೇಳಿದಿರಿ?' ಅಂತ ಕೇಳುತ್ತಾರಂತೆ. ಕೆಲವೊಮ್ಮೆ ಜೋರಾಗಿ ಕೆಲವೊಮ್ಮೆ ಕಣ್ಣೀರಾಗಿ ಮಿರ್ಜಾನಿನ ತವರಿನಲ್ಲಿ ಗರ್ನಾಲು ಸಾಬನ ಹೆಂಡತಿಗೆ ದವಾಖಾನೆ–ದೇವರು ಅಂತ ತಿರುಗಿಸುವುದೇ ಆಗಿದೆಯಂತೆ. ಈಗಲೂ ಆ ಮನೆ ಹಾಗೇ ಬಿದ್ದಿದೆ. ಗರ್ನಾಲು ಸಾಬರು ಮಡಲ ಸೋಗೆಗೆ ಅಂತ ನೆಟ್ಟು ನೀರುಣಿಸಿದ ತೆಂಗಿನ ಮರಗಳಿಂದ ಕಾಯಿ ಉದುರುತ್ತಿದೆ. ಸುತ್ತಲಿನ ಯಾರಾದರೂ ಓಡಿ ಬಂದು ಹೆಕ್ಕಿಕೊಂಡೊಯ್ಯುತ್ತಾರೆ. ಕಲ್ಪವೃಕ್ಷಕ್ಕೆ ಜಾತಿಧರ್ಮ, ಮಡಿ ಮೈಲಿಗೆಗಳ ಹಂಗಾದರೂ ಎಲ್ಲಿದೆ ಅಲ್ಲವೇ?

ಈಗಲೂ ತಾರಿ ಬಾಗಿಲಿಗಿಳಿದು ಕಾಲು ಕೊಡುವುತ್ತ ನಾಕು ದಾಪು ಹಾಕಿ ಗುಡಿಯಮ್ಮಗೆ ಕೈ ಮುಗಿವಾಗ ಕಣ್ಣು ಸಾಬರ ದಣಪೆಯತ್ತ ಹೊರಳುತ್ತದೆ. 'ಹೊಯ್, ಈಗ ಬಂದ್ಯಾ ತಂಗಿ?' ಅಂತ ಸಾಬರು ಕೇಳಿದಂತೆ... ಅರೆಸುಟ್ಟ ಮಾಡು ಬರೆಬರೆಯಾಗಿ ರಥದ ಗಾಲಿಯ ಗಾಯದ ಗೀರಿನಂತೆ, ಎದೆಯಾಳದಲ್ಲಿಯೇ ಏನೋ ನಟ್ಟು ಏನೇನೋ ಎಬ್ಬಿದಂತೆ...

## ವಿನಯಾ ಒಕ್ಕುಂದ

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, 'ಬಾಯಾರಿಕೆ', 'ನೂರು ಗೋರಿಯ ದೀಪ', 'ಹಸಬಿ' ಎಂಬ ಕವಿತೆಯ ಸಂಗ್ರಹಗಳನ್ನು, 'ಊರ ಒಳಗಣ ಬಯಲು', 'ಉರಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.